# Fourth Semester B.Com. Examination, Sept./Oct. 2022
## (CBCS)
## COMMERCE
## Paper – 4.4 : Cost Accounting

Time : 3 Hours                                                                                   Max. Marks : 70

***Instruction :*** *Answer should be written* ***completely*** *either in* ***English*** *or in* ***Kannada.***

## SECTION – A
### ವಿಭಾಗ - ಎ

1. Answer **any five** sub-questions. **Each** right answer carries **two** marks. **(5×2=10)**
ಯಾವುದಾದರೂ **ಐದು** ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಸರಿ ಉತ್ತರಕ್ಕೆ **ಎರಡು** ಅಂಕಗಳು.

a) What is machine hour rate ?
ಯಂತ್ರ ಗಂಟೆಯ ದರ ಎಂದರೇನು ?

b) What do you mean by abnormal loss ?
ಅಸಹಜ ನಷ್ಟ ಎಂದರೇನು ?

c) What do you mean by cost ?
ವೆಚ್ಚ ಎಂದರೇನು ?

d) What do you mean by direct material ?
ನೇರ ಸಾಮಗ್ರಿ ಎಂದರೇನು ?

e) What do you mean by over time ?
ಅಧಿಕ ಸಮಯವನ್ನು ಅರ್ಥೈಸಿ.

f) Write any four items of selling and distribution overheads.
ಮಾರಾಟ ಮತ್ತು ವಿತರಣಾ ಮೇಲ್ವೆಚ್ಚಗಳಿಗೆ ಯಾವುದಾದರೂ ನಾಲ್ಕು ಉದಾಹರಣೆ ಕೊಡಿ.

g) What is memorandum reconciliation account ?
ಮೆಮೋರ್‍ಯಾಂಡಮ್ ಹೊಂದಾಣಿಕೆ ಖಾತೆ ಎಂದರೇನು ?

## SECTION – B
### ವಿಭಾಗ - ಬಿ

Answer **any three** questions. **Each** right answer carries **six** marks. **(3×6=18)**
ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಸರಿ ಉತ್ತರಕ್ಕೆ **ಆರು** ಅಂಕಗಳು.

2. State the important functions of cost accounting.
ವೆಚ್ಚ ಲೆಕ್ಕಶಾಸ್ತ್ರದ ಪ್ರಮುಖ ಕಾರ್ಯಗಳನ್ನು ತಿಳಿಸಿ.

3. M/s Varsha Co. manufactured and sold 6000 sewing machines in the year 2021.

| | |
|---|---|
| Raw materials | ₹ 6,00,000 |
| Direct wages | ₹ 4,80,000 |
| Manufacturing expenses | ₹ 3,00,000 |

Factory overhead 50% of wages

Office overheads 10% of factory cost

Selling overheads ₹ 20 per unit sold

All machines were sold for ₹ 21,00,000.

Prepare cost sheet.

M/s ವರ್ಷ ಕಂಪನಿ ಲಿಮಿಟೆಡ್ 2021ರಲ್ಲಿ 6000 ಹೊಲಿಗೆ ಯಂತ್ರಗಳನ್ನು ತಯಾರಿಸಿ ಮಾರಿದ್ದಾರೆ.

| | |
|---|---|
| ಕಚ್ಚಾ ಸಾಮಗ್ರಿಗಳು | ₹ 6,00,000 |
| ನೇರ ಮಜೂರಿ | ₹ 4,80,000 |
| ಉತ್ಪಾದನಾ ವೆಚ್ಚ | ₹ 3,00,000 |

ಕಾರ್ಖಾನೆ ಮೇಲು ವೆಚ್ಚ ಮಜೂರಿಯ ಶೇ. 50ರಷ್ಟು

ಕಛೇರಿಯ ಮೇಲು ವೆಚ್ಚ ಕಾರ್ಖಾನೆ ವೆಚ್ಚದ ಶೇ. 10ರಷ್ಟು

ಮಾರಾಟ ಮೇಲು ವೆಚ್ಚ ₹ 20 ಪ್ರತಿ ಯೂನಿಟ್‌ಗೆ

ಎಲ್ಲಾ ಯಂತ್ರಗಳನ್ನು ₹ 21,00,000ಕ್ಕೆ ಮಾರಾಟ ಮಾಡಲಾಗಿದೆ.

ವೆಚ್ಚ ಪಟ್ಟಿಯನ್ನು ತಯಾರಿಸಿ.

4. Calculate, re-order level, minimum level, maximum level and average stock level from the following information.

| | | |
|---|---|---|
| Normal usage | – | 900 units per week |
| Maximum usage | – | 1350 units per week |
| Minimum usage | – | 300 units per week |
| Re-order period | – | 8 to 12 weeks |
| Re-order quantity | – | 7200 units |

ಕಂಡುಹಿಡಿಯಿರಿ : ಪುನರ್ ಆದೇಶ ಮಟ್ಟ, ಕನಿಷ್ಠ ಮಟ್ಟ, ಗರಿಷ್ಠ ಮಟ್ಟ ಮತ್ತು ಸರಾಸರಿ ದಾಸ್ತಾನು ಮಟ್ಟ, ವಿವರಗಳು ಕೆಳಕಂಡಂತಿವೆ.

| | | |
|---|---|---|
| ಸಾಮಾನ್ಯ ಬಳಕೆ | – | 900 ಯೂನಿಟ್‌ಗಳು ಪ್ರತಿ ವಾರಕ್ಕೆ |
| ಗರಿಷ್ಠ ಬಳಕೆ | – | 1350 ಯೂನಿಟ್‌ಗಳು ಪ್ರತಿ ವಾರಕ್ಕೆ |
| ಕನಿಷ್ಠ ಬಳಕೆ | – | 300 ಯೂನಿಟ್‌ಗಳು ಪ್ರತಿ ವಾರಕ್ಕೆ |
| ಪುನರ್ ಆದೇಶದ ಅವಧಿ | – | 8 ರಿಂದ 12 ವಾರಗಳು |
| ಪುನರ್ ಆದೇಶದ ಪ್ರಮಾಣ | – | 7200 ಯೂನಿಟ್‌ಗಳು |

5. Standard time allowed to complete a job is 25 hours. Hourly rate is ₹ 32, worker Sandhya complete the job in 25 hours and Tanu completes in 35 hours. Calculate the earnings of the workers under Halsey and Rowan plans.
ಒಂದು ಕೆಲಸವನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಶಿಷ್ಟ ಸಮಯ 25 ಗಂಟೆಗಳು. ಪ್ರತಿ ಗಂಟೆಗೆ ಮಜೂರಿ ₹ 32. ಸಂಧ್ಯಾ ತನ್ನ ಕೆಲಸವನ್ನು 25 ಗಂಟೆಗಳಲ್ಲಿ ಮತ್ತು ತನು ತನ್ನ ಕೆಲಸವನ್ನು 35 ಗಂಟೆಗಳಲ್ಲಿ ಪೂರ್ಣಗೊಳಿಸುತ್ತಾರೆ. ಕೆಲಸಗಾರರ ಮಜೂರಿಯನ್ನು ಹಾಲ್ಸೆ ಯೋಜನೆ ಮತ್ತು ರೋವನ್ ಯೋಜನೆ ಪ್ರಕಾರ ಕಂಡುಹಿಡಿಯಿರಿ.

6. From the following information compute a machine hour rate of machine no. 7 for the month of December.
Cost of machine ₹ 48,000
Estimated scrap value ₹ 3,000
Repairs and maintenance for life of machine ₹ 3,750
Effective working life 15000 hours
Power consumed by machine @ ₹ 0.45 per unit – ₹ 900
Standing charges for the month of December ₹ 600
The machine consumes 10 units of power per hour.
ಈ ಕೆಳಗಿನ ಮಾಹಿತಿಯಿಂದ ಯಂತ್ರ ನಂ. 7 ರ ಯಂತ್ರ ಗಂಟೆ ದರವನ್ನು ಡಿಸೆಂಬರ್ ತಿಂಗಳಲ್ಲಿ ಕಂಡುಹಿಡಿಯಿರಿ.
ಯಂತ್ರದ ಒಟ್ಟು ಮೌಲ್ಯ ₹ 48,000
ಅಂದಾಜಿಸಿದ ಚೂರುಪಾರು ಬೆಲೆ ₹ 3,000
ಯಂತ್ರದ ಜೀವಿತಾವಧಿಯಲ್ಲಿನ ದುರಸ್ತಿ ಮತ್ತು ನಿರ್ವಹಣೆ ₹ 3,750
ಯಂತ್ರದ ಜೀವಿತಾವಧಿ ಕೆಲಸ 15000 ಗಂಟೆಗಳು
ಯಂತ್ರದ ವಿದ್ಯುತ್ ಬಳಕೆ ₹ 0.45 ಪ್ರತಿ ಯೂನಿಟ್‌ಗೆ ಒಟ್ಟು ₹ 900
ಡಿಸೆಂಬರ್ ತಿಂಗಳ ಸ್ಥಾಯಿ ಖರ್ಚುಗಳು ₹ 600
ಯಂತ್ರವು ಗಂಟೆಗೆ 10 ಯೂನಿಟ್ ವಿದ್ಯುಚ್ಛಕ್ತಿಯನ್ನು ಬಳಸುತ್ತದೆ.

## SECTION – C
## ವಿಭಾಗ - ಸಿ

Answer **any three** questions. **Each** right answer carries **fourteen** marks. **(3×14=42)**
ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಸರಿ ಉತ್ತರಕ್ಕೆ **ಹದಿನಾಲ್ಕು** ಅಂಕಗಳು.

7. Mamatha Ltd. uses Aluminum wire as a raw material which is purchased from the market. The following particulars are available in respect of the transactions for October 2021.

| | |
|---|---|
| Oct. 1 | Opening balance 750 kg at ₹ 62.5 per kg |
| Oct. 3 | Purchased 1250 kg at ₹ 65 per kg |
| Oct. 4 | Issued 550 kg |
| Oct. 7 | Purchased 500 kg at ₹ 64 per kg |

Oct. 10 Issued 1100 kg
Oct. 20 Purchased 590 kg at ₹ 57.5 per kg
Oct. 22 Issued 400 kg
Oct. 25 Issued 900 kg
Oct. 26 Purchased 500 kg at ₹ 59 per kg
Oct. 27 Surplus 50 kg, returned to store out of quantity issued on Oct. 4.

There was a shortage of 30 kg on Oct 15.

Prepare stores ledger for these transactions under simple average method.

ಮಮತಾ ಕಂಪನಿ ಲಿಮಿಟೆಡ್ ಅಲ್ಯುಮಿನಿಯಂ ವೈರ್‌ಗಳನ್ನು ಕಚ್ಚಾ ಸಾಮಗ್ರಿಗಳಾಗಿ ಮಾರುಕಟ್ಟೆಗಳಲ್ಲಿ ಖರೀದಿ ಮಾಡಿದ್ದು, ಅಕ್ಟೋಬರ್ 2021 ರಲ್ಲಿ ದೊರೆತ ವಹಿವಾಡಿನ ವಿವರಗಳು ಕೆಳಕಂಡಂತಿವೆ.

ಅಕ್ಟೋಬರ್ 1 ಆರಂಭಿಕ ಶಿಲ್ಕು 750 ಕೆ.ಜಿ. ಪ್ರತಿ ಕೆ.ಜಿ.ಗೆ ₹ 62.5
ಅಕ್ಟೋಬರ್ 3 ಖರೀದಿ 1250 ಕೆ.ಜಿ. ಪ್ರತಿ ಕೆ.ಜಿ.ಗೆ ₹ 65
ಅಕ್ಟೋಬರ್ 4 ನೀಡಿಕೆ 550 ಕೆ.ಜಿ.
ಅಕ್ಟೋಬರ್ 7 ಖರೀದಿ 500 ಕೆ.ಜಿ. ಪ್ರತಿ ಕೆ.ಜಿ.ಗೆ ₹ 64
ಅಕ್ಟೋಬರ್ 10 ನೀಡಿಕೆ 1100 ಕೆ.ಜಿ.
ಅಕ್ಟೋಬರ್ 20 ಖರೀದಿ 590 ಕೆ.ಜಿ. ಪ್ರತಿ ಕೆ.ಜಿ.ಗೆ ₹ 57.5
ಅಕ್ಟೋಬರ್ 22 ನೀಡಿಕೆ 400 ಕೆ.ಜಿ.
ಅಕ್ಟೋಬರ್ 25 ನೀಡಿಕೆ 900 ಕೆ.ಜಿ.
ಅಕ್ಟೋಬರ್ 26 ಖರೀದಿ 500 ಕೆ.ಜಿ. ಪ್ರತಿ ಕೆ.ಜಿ.ಗೆ ₹ 59
ಅಕ್ಟೋಬರ್ 27 ಅಧಿಕವಾದ 50 ಕೆ.ಜಿ.ಯನ್ನು ಅಕ್ಟೋಬರ್ 4 ರಂದು ನೀಡಿಕೆಯಿಂದ ಹಿಂತಿರುಗಿಸಲಾಗಿದೆ.

ಅಕ್ಟೋಬರ್ 15 ರಂದು 30 ಕೆ.ಜಿ. ಕಡಿಮೆಯಾಗಿದೆ.

ಈ ಮೇಲ್ಕಂಡ ಮಾಹಿತಿಯಿಂದ ಸರಳ ಸರಾಸರಿ ಪದ್ಧತಿಯಲ್ಲಿ ಸರಕುಗಳ ಖಾತೆಯನ್ನು ತಯಾರಿಸಿ.

8. From the following particulars calculate weekly earnings of a worker under :

a) Straight piece rate
b) Differential piece rate (Taylor)
c) Halsey plan
d) Rowan premium plan

Weekly working hours – 40, piece rate ₹ 9, hourly rate of wages ₹ 23, normal time taken per piece 15 minutes, normal output per week 150 pieces, actual output of worker per week 180 pieces.

Differential piece rate :

a) 80% of piece rate for output below normal output.
b) 120% of piece rate for output above normal output.

ಈ ಕೆಳಕಂಡ ವಿವರಗಳಿಂದ ಕೆಲಸಗಾರರ ವಾರದ ಕೂಲಿಯನ್ನು ಕಂಡುಹಿಡಿಯಿರಿ.

a) ನೇರ ತುಂಡು ದರ ಪದ್ಧತಿಯಂತೆ

b) ಟೇಲರ್‌ರವರ ವಿವಿಧ ತುಂಡು ದರ ಪದ್ಧತಿಯಂತೆ

c) ಹಾಲ್ಸೆ ಯೋಜನೆ ಮತ್ತು

d) ರೋವನ್ ಪ್ರೀಮಿಯಂ ಯೋಜನೆಯಂತೆ.

ಒಂದು ವಾರದ ಕೆಲಸದ ಗಂಟೆಗಳು – 40, ತುಂಡು ದರ ₹ 9, ಗಂಟೆಗೆ ಕೂಲಿ ದರ ₹ 23, ಪ್ರತಿ ತುಂಡಿಗೆ ನೀಡಿರುವ ಸಾಮಾನ್ಯ ಸಮಯ 15 ನಿಮಿಷಗಳು, ಪ್ರತಿ ವಾರಕ್ಕೆ ಸಾಮಾನ್ಯ ಉತ್ಪಾದನೆ 150 ತುಂಡುಗಳು, ಕೆಲಸಗಾರರ ನಿಜವಾದ ಉತ್ಪಾದನೆ ವಾರಕ್ಕೆ 180 ತುಂಡುಗಳು.

ವಿವಿಧ ತುಂಡು ದರ :

a) ಶೇ. 80 ರಂತೆ ತುಂಡು ದರದ ಮೇಲೆ ಕಂಡುಹಿಡಿಯಿರಿ ಉತ್ಪಾದನೆಯು ಸಾಮಾನ್ಯ ಉತ್ಪಾದನೆಗಿಂತ ಕಡಿಮೆ ಇದ್ದಲ್ಲಿ

b) ಶೇ. 120 ರಂತೆ ತುಂಡು ದರದ ಮೇಲೆ ಕಂಡುಹಿಡಿಯಿರಿ, ಉತ್ಪಾದನೆಯು ಸಾಮಾನ್ಯ ಉತ್ಪಾದನೆಗಿಂತ ಹೆಚ್ಚಾಗಿದ್ದಲ್ಲಿ.

9. Prakash Ltd. furnish the following information for 15000 units of a product manufactured during the year ended 31-3-22 :

| | ₹ |
|---|---|
| Materials | 1,35,000 |
| Direct wages | 90,000 |
| Power and consumable stores | 18,000 |
| Indirect wages | 22,500 |
| Factory lighting | 8,250 |
| Cost of rectification of defective work | 4,500 |
| Clerical salaries and management expenses | 50,250 |
| Selling expenses | 8,250 |
| Sale proceeds of scrap | 3,000 |
| Repairs, maintenance and depreciation of plant | 17,250 |

The net selling price was ₹ 47.4 per unit sold and all units were sold.

As from 1-4-2023, the selling price was reduced to ₹ 46.5 per unit. It was estimated that production could be increased in 2023 by 50% due to spare capacity.

Rates for materials and direct wages will increase by 10%. You are required to prepare :

a) Cost sheet for the year ended 31-3-2022 showing various elements of cost per unit, and

b) Estimated cost and profit for Financial year 2022-23.

Assume that 22500 units will be produced and sold during the year 2022-23 and factory overheads will be recovered as a percentage of direct wages and office and selling expenses as a percentage of works cost.

ಪ್ರಕಾಶ್ ಲಿಮಿಟೆಡ್ ಕಂಪನಿಯು 31 ಮಾರ್ಚ್ 2022 ರ ವರ್ಷಾಂತ್ಯಕ್ಕೆ ಉತ್ಪಾದಿಸಿದ 15000 ಯೂನಿಟ್‌ಗಳಿಗೆ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿದೆ :

| | ₹ |
|---|---|
| ಸಾಮಗ್ರಿಗಳು | 1,35,000 |
| ನೇರ ಮಜೂರಿ | 90,000 |
| ವಿದ್ಯುಚ್ಛಕ್ತಿ ಮತ್ತು ಬಳಕೆಯಾದ ಸರಕುಗಳು | 18,000 |
| ಪರೋಕ್ಷ ಮಜೂರಿ | 22,500 |
| ಕಾರ್ಖಾನೆ ದೀಪಗಳು | 8,250 |
| ದೋಷಯುಕ್ತ ಕೆಲಸವನ್ನು ದುರಸ್ತಿಗೊಳಿಸಿದ ವೆಚ್ಚ | 4,500 |
| ನಿರ್ವಹಣ ವೆಚ್ಚಗಳು ಮತ್ತು ಗುಮಾಸ್ತರ ಸಂಬಳ | 50,250 |
| ಮಾರಾಟ ವೆಚ್ಚಗಳು | 8,250 |
| ಚೂರುಪಾರು ಮಾರಾಟದಿಂದ ಬಂದದ್ದು | 3,000 |
| ದುರಸ್ತಿ , ನಿರ್ವಹಣೆ ಮತ್ತು ಸವಕಳಿ (ಯಂತ್ರಾಗಾರಕ್ಕೆ ಸಂಬಂಧಿಸಿದ್ದು) | 17,250 |

ನಿವ್ವಳ ಮಾರಾಟ ಬೆಲೆಯು ₹ 47.4 ಪ್ರತಿ ಯೂನಿಟ್‌ಗೆ ಮತ್ತು ಉತ್ಪಾದಿಸಿದ ಎಲ್ಲಾ ಯೂನಿಟ್‌ಗಳು ಮಾರಾಟವಾಗಿವೆ.

1-4-2023 ರಿಂದ ಮಾರಾಟ ಬೆಲೆಯು ಪ್ರತಿ ಯೂನಿಟ್‌ಗೆ ₹ 46.5 ಕ್ಕೆ ಇಳಿಸಲಾಗಿದೆ. ಇದರಿಂದ ಮುಂದಿನ 2023ರ ಸಾಲಿನಲ್ಲಿ ಮಿಗುತೆ ಸಾಮರ್ಥ್ಯದಿಂದಾಗಿ ಉತ್ಪಾದನೆಯು ಶೇ. 50 ರಷ್ಟು ಅಧಿಕಗೊಳ್ಳುವುದು ಎಂದು ಅಂದಾಜಿಸಲಾಗಿದೆ.

ಸಾಮಗ್ರಿ ಮತ್ತು ನೇರ ಮಜೂರಿ ದರಗಳು ಶೇ. 10 ರಷ್ಟು ಹೆಚ್ಚಾಗಲಿವೆ.

ಮೇಲಿನ ಮಾಹಿತಿಯನ್ನು ಆಧರಿಸಿ ಕೆಳಗಿನವುಗಳನ್ನು ತಯಾರಿಸಲು ಸೂಚಿಸಿದೆ.

a) 31-ಮಾರ್ಚ್-2022 ರ ವರ್ಷಾಂತ್ಯಕ್ಕೆ ಪ್ರತಿ ಯೂನಿಟ್‌ಗೆ ಸಂಬಂಧಿಸಿದಂತೆ ವೆಚ್ಚ ಪಟ್ಟಿಯನ್ನು ತಯಾರಿಸಿ ಮತ್ತು

b) 2022-23 ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಅಂದಾಜು ವೆಚ್ಚ ಮತ್ತು ಲಾಭ ಪಟ್ಟಿಯನ್ನು ತಯಾರಿಸಿ.

2022-23 ನೇ ಹಣಕಾಸು ಸಾಲಿನಲ್ಲಿ ಉತ್ಪಾದಿಸಲಾಗುವ ಎಲ್ಲಾ 22500 ಯೂನಿಟ್‌ಗಳು ಮಾರಾಟವಾಗಲಿವೆ ಎಂದು ಅಂದಾಜಿಸಲಾಗಿದೆ. ಕಾರ್ಖಾನೆ ಮೇಲ್ವೆಚ್ಚಗಳನ್ನು ನೇರ ಮಜೂರಿಯ ಮೇಲೆ ಮತ್ತು ಕಛೇರಿ ಮಾರಾಟ ಮೇಲ್ವೆಚ್ಚಗಳನ್ನು ವರ್ಕ್ಸ್ ಕಾಸ್ಟ್ ಮೇಲೆ ಅಂದಾಜಿಸಲಾಗಿದೆ.

10. From the following details, you are required to prepare a reconciliation statement and also ascertain profits as per financial books.

| **Particulars** | ₹ **Cost Books** | ₹ **Financial Books** |
|---|---|---|
| 1. Profit as per cost records | 7,21,875 | ? |
| 2. Value of opening stock | 1,62,000 | 1,40,625 |
| 3. Value of closing stock | 1,77,750 | 1,62,000 |
| 4. Interest on bank loan paid | – | 34,220 |

| | | |
|---|---|---|
| 5. Works overheads | 1,28,438 | 1,35,000 |
| 6. Tax provision | – | 80,157 |
| 7. Administration overheads | 1,73,907 | 1,92,470 |
| 8. Loss on sale of machinery | – | 28,125 |
| 9. Selling overheads | 85,500 | 72,188 |
| 10. Interest on bank deposits received | – | 34,220 |
| 11. Depreciation | – | 1,17,845 |
| 12. Reserve for bad debts | – | 30,095 |
| 13. Stores adjustment (credit) in p/l a/c | – | 14,063 |

ಕೆಳಗಿನ ವಿವರಗಳಿಂದ ಸಮನ್ವಯ ಪಟ್ಟಿಯನ್ನು ತಯಾರಿಸಿ ಹಾಗೂ ಹಣಕಾಸು ಲೆಕ್ಕಶಾಸ್ತ್ರದ ಪ್ರಕಾರ ಲಾಭವನ್ನು ಕಂಡುಹಿಡಿಯಿರಿ.

| ವಿವರಗಳು | ವೆಚ್ಚ ಶಾಸ್ತ್ರದ ಪುಸ್ತಕ ₹ | ಲೆಕ್ಕಶಾಸ್ತ್ರದ ಪುಸ್ತಕ ₹ |
|---|---|---|
| 1. ವೆಚ್ಚ ನಿರ್ಣಯಶಾಸ್ತ್ರದಂತೆ ಬಂದಿರುವ ಲಾಭ | 7,21,875 | ? |
| 2. ಪ್ರಾರಂಭಿಕ ಸರಕು ಶುಲ್ಕ | 1,62,000 | 1,40,625 |
| 3. ಅಂತ್ಯದ ಸರಕು ಶುಲ್ಕ | 1,77,750 | 1,62,000 |
| 4. ಬ್ಯಾಂಕಿನ ಸಾಲದ ಮೇಲೆ ಕೊಟ್ಟ ಬಡ್ಡಿ | – | 34,220 |
| 5. ಕಾರ್ಖಾನೆ ಮೇಲ್ವೆಚ್ಚ | 1,28,438 | 1,35,000 |
| 6. ತೆರಿಗೆ ಮೀಸಲಾತಿ | – | 80,157 |
| 7. ಆಡಳಿತ ಮೇಲ್ವೆಚ್ಚ | 1,73,907 | 1,92,470 |
| 8. ಯಂತ್ರ ಮಾರಾಟದ ನಷ್ಟ | – | 28,125 |
| 9. ಮಾರಾಟ ವೆಚ್ಚ | 85,500 | 72,188 |
| 10. ಬ್ಯಾಂಕಿನ ಠೇವಣಿ ಮೇಲೆ ಬಂದ ಬಡ್ಡಿ | – | 34,220 |
| 11. ಸವಕಳಿ | – | 1,17,845 |
| 12. ಕರಡು ಸಾಲದ ನಿಧಿ | – | 30,095 |
| 13. ದಾಸ್ತಾನು ಹೊಂದಾಣಿಕೆ ಲಾಭ-ನಷ್ಟ ಖಾತೆಯಲ್ಲಿ (ಜಮಾ) | – | 14,063 |

11. A firm has three production departments X, Y and Z and two service departments A and B. The following figures are extracted from the books of the factory :

| | ₹ | | ₹ |
|---|---|---|---|
| Depreciation | 12,000 | Indirect wages | 1,800 |
| Lighting | 720 | Power | 1,800 |
| Rent | 6,000 | Others | 12,000 |

**Other Particulars :**

| | X | Y | Z | A | B |
|---|---|---|---|---|---|
| Floor space (sq.feet) | 400 | 500 | 600 | 400 | 100 |
| Direct wages (₹) | 900 | 600 | 900 | 900 | 700 |
| Light points | 20 | 30 | 40 | 20 | 10 |
| H.P. of the machines | 75 | 30 | 25 | 10 | – |
| Value of the machinery (₹) | 12,000 | 16,000 | 20,000 | 1,000 | 1,000 |
| Working hours | 3113 | 2014 | 2033 | – | – |

The expenses of service departments A and B are to be allocated as follows :

| | X | Y | Z | A | B |
|---|---|---|---|---|---|
| A | 20% | 30% | 40% | – | 10% |
| B | 40% | 20% | 20% | 20% | – |

You are requested to distribute the service department expenses to the production department (X, Y and Z) and calculate hourly rate of each production department.

ಒಂದು ಕಾರ್ಖಾನೆಯಲ್ಲಿ ಮೂರು ಉತ್ಪಾದನಾ ಇಲಾಖೆಗಳು X, Y ಮತ್ತು Z ಹಾಗೂ ಎರಡು ಸೇವಾ ಇಲಾಖೆಗಳು A ಮತ್ತು B ಇವೆ. ಕೆಳಗಿನ ಅಂಕಿ ಅಂಶಗಳನ್ನು ಕಾರ್ಖಾನೆಯ ಪುಸ್ತಕಗಳಿಂದ ಪಡೆಯಲಾಗಿದೆ.

| | ₹ | | ₹ |
|---|---|---|---|
| ಸವಕಳಿ | 12,000 | ಪರೋಕ್ಷ ವೆಚ್ಚಗಳು | 1,800 |
| ದೀಪಗಳು | 720 | ವಿದ್ಯುಚ್ಛಕ್ತಿ | 1,800 |
| ಬಾಡಿಗೆ | 6,000 | ಇತರೆ | 12,000 |

**ಇತರೆ ವಿವರಗಳು :**

| | X | Y | Z | A | B |
|---|---|---|---|---|---|
| ನೆಲದ ಜಾಗ (ಚದರ ಅಡಿಗಳಲ್ಲಿ) | 400 | 500 | 600 | 400 | 100 |
| ನೇರ ಮಜೂರಿ (₹) | 900 | 600 | 900 | 900 | 700 |
| ದೀಪಗಳ ಸಂಖ್ಯೆ | 20 | 30 | 40 | 20 | 10 |
| ಯಂತ್ರಗಳ H.P. | 75 | 30 | 25 | 10 | – |
| ಯಂತ್ರಗಳ ಮೌಲ್ಯ (₹) | 12,000 | 16,000 | 20,000 | 1,000 | 1,000 |
| ಕೆಲಸದ ಗಂಟೆಗಳು | 3113 | 2014 | 2033 | – | – |

ಸೇವಾ ವಿಭಾಗಗಳಾದ A ಮತ್ತು Bಗಳ ಖರ್ಚುಗಳನ್ನು ಈ ಕೆಳಗಿನವುಗಳಂತೆ ಹಂಚಿಕೆ ಮಾಡಲಾಗಿದೆ :

| | X | Y | Z | A | B |
|---|---|---|---|---|---|
| A | 20% | 30% | 40% | – | 10% |
| B | 40% | 20% | 20% | 20% | – |

ಸೇವಾ ವಿಭಾಗಗಳ ಖರ್ಚುಗಳನ್ನು ಉತ್ಪಾದನಾ ವಿಭಾಗ (X, Y ಮತ್ತು Z)ಗಳಿಗೆ ಹಂಚಿಕೆ ಮಾಡಿ ಪ್ರತಿ ಉತ್ಪಾದನಾ ವಿಭಾಗಗಳ ಗಂಟೆ ದರವನ್ನು ಕಂಡುಹಿಡಿಯಿರಿ.